doc-526
T-P-24

Reg No B G 155 ಸ್ವಾತಂತ್ರ್ಯ ರಜತೋತ್ಸವ ಸಂಚಿಕೆ 15—8—72

55th Year of Publication ★ 'Satyavadi' daily, Mysore 4

ಪ್ರಕಾಶಕರು ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಸತ್ಯವಾದಿ

ಪ್ರಧಾನರ ಸಂದೇಶ

ಸ್ವಾತಂತ್ರ್ಯ ರಜತೋತ್ಸವ

ಇದು ಸ್ವಾತಂತ್ರ್ಯದ ರಜತೋತ್ಸವ ಆಚರಣೆಯ ತಿಂಗಳು ಕಳೆದ ಇಪ್ಪತ್ತೈದು ವರ್ಷಗಳಲ್ಲಿ ನಮ್ಮ ದೇಶ ಎದುರಿಸಿದ ಬವಣೆಗಳು ಹಲವು, ಸವಾಲು ಅನೇಕ. ಇವೆಲ್ಲವನ್ನೂ ಜಯಿಸಿ, ರಾಷ್ಟ್ರ ಶಕ್ತಿ ಸಂಪನ್ನತೆಯನ್ನು ಹೆಚ್ಚಿಸಿಕೊಂಡಿದೆ ; ಐಕ್ಯತೆಯನ್ನು ಬೆಳೆಸಿಕೊಂಡಿದೆ ; ಗುರಿ ಸಾಧನೆಯ ದೃಢ ಸಂಕಲ್ಪವನ್ನು ಬಲಪಡಿಸಿಕೊಂಡಿದೆ.

ದೇಶದಲ್ಲಿ ಪ್ರಜಾಪ್ರಭುತ್ವ ಬೇರುಬಿಟ್ಟಿದೆ ; ಸತ್ವ ಪರೀಕ್ಷೆಯಲ್ಲಿ ನಿಂದು ಗೆದ್ದಿದೆ. ಆದರೆ ರಾಷ್ಟ್ರದ ಆರ್ಥಿಕ ಸ್ವಾವಲಂಬನೆ ಇನ್ನು ಸಿದ್ಧಿಯಾಗಬೇಕಷ್ಟೆ. ಜನಸಾಮಾನ್ಯರ ನಿತ್ಯ ಜೀವನ ಸಾಕಷ್ಟು ಉತ್ತಮಗೊಳ್ಳಬೇಕಾಗಿದೆ : ಈ ಸಾಧನೆ ರಾಷ್ಟ್ರದ ಆರ್ಥಿಕ ಸ್ವಾತಂತ್ರ್ಯದ ಸಿದ್ಧಿಯೂ ಹೌದು

ಬಡತನದ ಹಾಗೂ ಅಸಮಾನತೆಯ ವಿರುದ್ಧ ಹೋರಾಟದಲ್ಲಿ ಜನಕೋಟಿಯೆಲ್ಲ ಒಂದಾಗಿ ಪ್ರಯತ್ನಿಸಬೇಕಾಗಿದೆ : ಜನತೆಯ ಅಪಾರ ನಂಬಿಕೆ ಮತ್ತು ಕೃತ ಸಂಕಲ್ಪದಿಂದಾಗಿ ನನಗೆ ರಾಜಕೀಯ ಸ್ವಾತಂತ್ರ್ಯ ಲಭಿಸಿತು. ನನ್ನ ಗುರಿ ಸುಸ್ಪಷ್ಟ. ಇಷ್ಟೊಂದು ಅಗಾಧವಾದ ಕಾರ್ಯವನ್ನು ಅಷ್ಟೆ ಜಟಿಲವಾದ ಪರಿಸ್ಥಿತಿಯಲ್ಲಿ ಯಾವ ದೇಶವೂ ಕೈಗೊಂಡಿರಲಿಲ್ಲವಾದ ಕಾರಣನನ್ನ ದಾರಿಯನ್ನು ನಾನೇ ನಿರ್ಮಿಸುತ್ತ ಮುನ್ನಡೆಯುತ್ತಿದ್ದೇನೆ ; ಈ ಕಾರಣದಿಂದಾಗಿ ದಾರಿಯುದ್ದಕ್ಕೂ ಸ್ಥಂಚಿತ ಹಾಗೂ ಅರಿಚಿತ ಅಡೆತೊಡೆಗಳನ್ನು ಎದುರಿಸಬೇಕಾಗಿದೆ

ಸೌಜನಶೀಲ ನವಸಮಾಜದತ್ತ ಸಾಗುತ್ತಿರುವ ಈ ದಾರಿಯಲ್ಲಿ ಆತ್ಮವಿಶ್ವಾಸ ಹಾಗೂ ಧೈರ್ಯ ನನ್ನ ಸಂಗಾತಿಯಾಗಿರಲಿ ಎಲ್ಲರಿಗೂ ನ್ಯಾಯ, ಸಮಾನ ಅವಕಾಶ, ಪ್ರತಿ ವ್ಯಕ್ತಿಗೂ ಪೂರ್ಣ ವಿಕಾಸ ಹೊಂದಲು ಅನುಕೂಲತೆ, ಗಂಡುಹೆಣ್ಣೆನ್ನದೆ ಪ್ರತಿಯೊಬ್ಬರಿಗೂ ಇತರರ ಬಗೆಗೆ ತನಗಿರುವ ಹೊಣೆಯನ್ನು ಅರಿತುಕೊಂಡು ಪ್ರಜಾಪ್ರಭುತ್ವ ಪ್ರಭುತ್ವ ಪದ್ಧತಿಯಲ್ಲಿ ಕಾರ್ಯಪ್ರವೃತ್ತರಾಗುವ ಸುಸಂದರ್ಭ — ಇದು ಈ ಸಮಾಜದ ಸ್ವರೂಪ.

(ಇಂದಿರಾ ಗಾಂಧಿ)

★

ಸತ್ಕಾರ

ಮೈಸೂರು— ಪುರಸಭೆಯವರು ಭಾನುವಾರ ಮಧ್ಯಾಹ್ನ ಪುರಸಭಾ ಕಚೇರಿಯಲ್ಲಿ ಶ್ರೀ ಸಮತಂತೋ ನಾಟಕೋತ್ಸವ ಪದಸಂಪಾದನಾರ್ಥವಾಗಿ ಟೇಪ್ ರೆಕಾರ್ಡಿಸಿದ್ದರು — ಸಮತಂತೋರವರ ಅಮೋಘ ಕಾರ್ಯಕಲಾಪಗಳು ಪ್ರಶಂಸಿಸಲಾಯಿತು ; ತಮ್ಮನ್ನು ಸನ್ಮಾನಿಸಿದಕ್ಕಾಗಿ ವಂದಿಸಿದರು

ರೇಸಸ್

ಮೈಸೂರು— ಪ್ರಾರಂಭವಾಗುವ ಕುದುರೆ ಜೂಜಿನ ಸಂಬಂಧದಲ್ಲಿ ಸೀನಿಯರ್ ಸ್ಟಿವರ್ಡ್ ಶ್ರೀ ಎಫ್. ಕೆ. ಇರಾನಿಯವರು ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಎಲ್ಲ ವಿಷಯಗಳನ್ನೂ ವಿವರಿಸಿದರು

Mysore Races 1972

1st Day, TUESDAY, 15th August 1972

Card of 6 Races

1st Race starts at 2-15 p. m.

ರೈತ ಬಾಂಧವರೇ,

★

ವ್ಯವಸಾಯವನ್ನು ಯಾಂತ್ರೀಕರಿಸಿ ಹೆಸರು ಕ್ರಾಂತಿ ಸಾಧಿಸುವ ದಿಸೆಯಲ್ಲಿ ಹೊಸ ನಂಬಿಕೆಯನ್ನು ಕೃಷಿಕರಲ್ಲಿ ಮೂಡಿಸಲು ದಿಟ್ಟ ಹೆಜ್ಜೆ ಇಟ್ಟು ಮುನ್ನಡೆಯುತ್ತಿರುವ

ಕರ್ನಾಟಕ ಕೃಷಿಕೈಗಾರಿಕಾ ಕಾರ್ಪೊರೇಷನ್ ನಿಯಮಿತ

ನಿಮ್ಮ ಸೇವೆಗೆ ಸಿದ್ಧ

ರೈತರ ಪೂರ್ಣ ಮನಸ್ಸು, ಸಹಕಾರ ಮತ್ತು ಮುಡಿಪು ಅಗತ್ಯ. ಅಧುನಿಕ ಹಾಗೂ ವೈಜ್ಞಾನಿಕ ಬೇಸಾಯ ವಿಧಾನಗಳನ್ನು ಅನುಸರಿಸಿ, ಅಧಿಕ ಇಳುವರಿ ಪಡೆದು ಆಹಾರ ಪದಾರ್ಥಗಳ ಸ್ವಾವಲಂಬನೆ ಸಾಧಿಸಲು ನಿಮಗೆ ಬೇಕಾಗಿರುವ :—

★

★ ಟ್ರಾಕ್ಟರ್ ಅಥವಾ ಪವರ್ ಟಿಲ್ಲರ್.

★ ಜಮೀನು ಮಟ್ಟ ಮಾಡುವ ಬುಲ್ ಡೋಜ್ಜರ್ ಯಂತ್ರ.

★ ನೀರೆತ್ತುವ ವಿದ್ಯುತ್ ಚಾಲಿತ ಅಥವಾ ಡೀಸೆಲ್ ಪಂಪು.

★ ಕೊಳವೆ ಬಾವಿ ಕೊರೆಯುವ ಮತ್ತು ಬಾವಿ ಸ್ಫೋಟಕ ಯಂತ್ರ.

★ ಅಧಿಕ ಇಳುವರಿ ನೀಡುವ ಸುಧಾರಿಸಿದ ಬಿತ್ತನೆ ಬೀಜಗಳು.

★ ರಾಸಾಯನಿಕ ಗೊಬ್ಬರ ಮತ್ತು ಸಸ್ಯ ಸಂರಕ್ಷಣಾ ಔಷಧಿಗಳು.

★

ಇವೇ ಮುಂತಾದವುಗಳ ಬೇಡಿಕೆಯನ್ನು ಪೂರೈಸಲು ಹಾಗೂ ಈ ಬಗ್ಗೆ ಸಂಪೂರ್ಣ ಮಾಹಿತಿ ಪಡೆಯಲು ಸಮೀಪದ ಕೇಂದ್ರ ಅಥವಾ ಅಧಿಕೃತ ಪ್ರತಿನಿಧಿಗಳಲ್ಲಿಗೆ ಒಮ್ಮೆ ಭೇಟಿಕೊಡಿ

★

ಹೆಚ್ಚಿನ ವಿವರಗಳಿಗೆ ವ್ಯವಹರಿಸಿ. ಸಾರ್ವಜನಿಕ ಸಂಪರ್ಕಾಧಿಕಾರಿ

ಮೈಸೂರು ರಾಜ್ಯ ಕೃಷಿ ಕೈಗಾರಿಕಾ ಲಿಮಿಟೆಡ್

ಕಾರ್ಪೊರೇಷನ್ ನಿಯಮಿತ

ನಂ. 10, ಆಲಿ ಅಸ್ಕರ್ ರಸ್ತೆ, ಬೆಂಗಳೂರು – 1 ಬಿ.

ಮೂಡಿ ಬಂದಿದೆ ನಮ್ಮ ಚೆಲುವ " ಕರ್ನಾಟಕ "

ಭಕ್ತಿ ಗೊಲುಮೆಯ ಬೀಡು ಪುಣ್ಯ ಋಷಿಗಳ ಗೂಡು
ಕಾವ್ಯ ಗೋದಾವರಿಯ ಶರಧಿಯಿದು ನೋಡು
ಇತಿಹಾಸ ಹೊಗಳಿರುವ ಚೆಲುವಿನುದ್ಯಾನವಿದು
ದಾನಧರ್ಮದ ಮೇಲ್ಮೆ ಹಾಲು ಹಳ್ಳವದು ಈ ನಾಡು ॥ 1 ॥

ಕರ್ನಾಟಕ ಮಾತೆ ಜಯವಿದೋ ನಿನ್ನಡಿಗೆ
ನಿನ್ನ ಚರಣಗಳಿಗೆ ನಮ್ಮದಿದೊ ನಮನ
ಭಗವತಿಯೆ ಭಾರತಿಯೇ ಕಸ್ತೂರಿ ನುಡಿಸುತ್ತೆ
ಬಹುದಿನದ ಕನಸಿನಾ ಫಲ, ತಳೆದಿರುವ ಜನುಮ ॥ 2 ॥

ನಿನ್ನ ಹೆಸರಿನ ಜೇನು, ಕೀರುತಿಯ ಸವಿಯ ಸಿಹಿ
ಕೇಂಕೇಂಗಳಲ್ಲಿ ಹರಿಯ ಬೇಕು
ಜೈ ಕರ್ನಾಟಕ ಮಾತೆ ! ಓ ಪ್ರೀತೆ ಈ ಘೋಷ
ಶಾಶ್ವತದ ಸಿರಿಯಾಗಿ ಉಳಿಯಬೇಕು ॥ 3 ॥

— ಕೃಷಿಕರ ಸಂಘಟನೆ

★

ಸಸ್ಯಗಳಲ್ಲಿಯೂ ಲೈಂಗಿಕ ಉದ್ರೇಕ ಕ್ರಿಯೆ

ಡುಸೆಲ್ಡಾರ್ಫ್ (ಡಾಡ್ಪ್) – ಪ್ರಾಣಿಗಳಲ್ಲಿರುವಂತೆಯೇ ಸಸ್ಯ ಪ್ರಪಂಚದಲ್ಲಿಯೂ ಲೈಂಗಿಕ ಉದ್ರೇಕ ತತ್ವಗಳು ಇವೆಯೆಂದೂ, ಅವುಗಳಲ್ಲಿಯೂ ಗರ್ಭಧಾರಣೆ ವಂಶಾಭಿವೃದ್ಧಿ ಮೊದಲಾದ ಕಾರ್ಯಗಳು ವೈಶಿಷ್ಟ್ಯಪೂರ್ಣ ರೀತಿಯಿಂದ ನಡೆಯುವದೆಂದೂ ಜರ್ಮನ್ ವಿಜ್ಞಾನಿ ಪ್ರೊಫೆಸರ್ ಲೋಥರ್ ಜಾನಿಕೆರವರು ಪ್ರಯೋಗಗಳಿಂದ ನಿರ್ಧರಿಸಿದ್ದಾರೆ.

★

ಹಸುಗಳು ಮೇಯುವ ಕಾಲ ನಿರ್ಧರಿಸಲು

ಹ್ಯಾನೋವರ್ (ಡಾಡ್) — ಫೆಡರಲ್ ರಿಪಬ್ಲಿಕ್ ಜರ್ಮನಿಯಲ್ಲಿ ಹಸುಗಳು ಮೇಯುವ ಕಾಲವನ್ನು ನಿರ್ಧರಿಸಲು ಕತ್ತಿಗೆ ಗಡಿಯಾರವನ್ನು ಕಟ್ಟಿ ಬಿಡುವ ವ್ಯವಸ್ಥೆ ಮಾಡಿ ಪ್ರಯೋಗ ನಡೆಸುತ್ತಾರೆ : ಹಸುವು ಮೇಯುವುದಕ್ಕಾಗಿ ಕತ್ತನ್ನು ಬಗ್ಗಿಸಿದರೆ ಸಾಕು, ಗಡಿಯಾರವು ಕಾಲವನ್ನು ಸೂಚಿಸಿ ತಾನಾಗಿ ಬರೆದುಕೊಳ್ಳುತ್ತದೆ ; ಅದು ಮತ್ತೆ ಕತ್ತೆತ್ತಿದಾಗ ನಿಂತುಹೋಗುವುದು. ಇನ್ನು ಮುಂದೆ ರಾತ್ರಿಯ ಕಾಲದಲ್ಲಿ ವರ್ಣರಂಜಿತ ದೀಪಗಳನ್ನು ಅಳವಡಿಸಿ ರಾತ್ರಿಯಲ್ಲಿ ಮೇಯುವ ಕಾಲವನ್ನೂ ನಿರ್ಧರಿಸಲ್ಪಡುವುದು. (ಯೂ ಪಿ ಎಸ್)

★

ದೇವ ಪೂಜೆ

ಮಾರ್ಕ್ಸಿಸ್ಟ್ ಕಮ್ಯೂನಿಸ್ಟು ನಾಯಕ ಶ್ರೀ ಎ. ಕೆ. ಗೋಪಾಲ ' ದೇವ ಸ್ಥಾನಕ್ಕೆ ಹೋಗುವ ಮಾರ್ಕ್ಸಿಸ್ಟರನ್ನು, ಮಾರ್ಕ್ಸಿಸ್ಟರು ಅಥವಾ ಕಮ್ಯುನಿಸ್ಟರು ಎನ್ನಲಾಗುವುದಿಲ್ಲ " ಎಂದು ಹೇಳಿರುವರು. ನಾರ್ಕ್ಸನ ತತ್ವವು ದೇವರಪೂಜೆಯೊಡನೆ ಇರಲಾರದೆಂದು ಹೇಳಿರುವರು ವಂಥೂರೆಯಲ್ಲಿ ನಡೆದ 9 ನೇ ಕಮ್ಯುನಿಸ್ಟು ಕಾಂಗ್ರೆಸ್ಸಿನ ಕೆಲವು ಪ್ರತಿನಿಧಿಗಳು ಮೀನಾಕ್ಷಿ ದೇವಾಲಯದಲ್ಲಿ ಪೂಜೆ ನೆರವೇರಿಸಿದರೆಂಬುದು ಹೀನಾಮಾನಕರವೆಂದಿರುವರು.

ಯಾರಾದರೂ ಪೂಜೆ ನಡೆಸಿದ್ದರೆ ಅವರು ನಿಜವಾದ ಮಾರ್ಕ್ಸಿಸ್ಟರಲ್ಲವೆಂದು ಹೇಳಿ, ಅವರಲ್ಲಿ ಅನೇಕರು ದೇವಾಲಯಕ್ಕೆ ಭೇಟಿಕೊಟ್ಟಿರಬಹುದೆಂದು ಹೇಳಿರುವರು. ತಮ್ಮ ಪಕ್ಷದಲ್ಲಿ ದೇವಾಲಯಕ್ಕೆ ಹೋಗುವವರ ವಿರುದ್ಧ ತಕ್ಷಣ ಚಳವಳ ಹೂಡುವ ಯಾವ ಕಾರ್ಯಕ್ರಮವಿಲ್ಲವೆಂದೂ ತಿಳಿಸಿರುವರು.

ದಿವ್ಯವಾಣಿ

ಕ್ಷಮಿಸುವುದು ಶಿಕ್ಷಿಸುವುದಕ್ಕಿಂತ ಹೆಚ್ಚು ಘನತೆಯಿಂದ ಕೂಡಿದ್ದಾಗಿದೆ
— ಮಹಾತ್ಮಾ ಗಾಂಧಿ

ಮನುಷ್ಯನ ಅನೇಕ ಆಶೆಗಳಲ್ಲಿ ಅಧಿಕಾರಾಕಾಂಕ್ಷೆ, ಯಶೋಭಿಲಾಷೆ ಮುಖ್ಯವಾದವು — ಬರ್ಟ್ರಂಡ್ ರಸೆಲ್

ವುಡ್‌ಲ್ಯಾಂಡ್ 11-8-72 ರಿಂದ ಅಮೋಘ 15 ನೇ ವಾರ

.... ಚಿತ್ತಾಕರ್ಷಕ ಕನ್ನಡ ಚಿತ್ರ ....

ಹೃದಯ ಸಂಗಮ

ನಟಸಾರ್ವಭೌಮ ರಾಜಕುಮಾರ್, ಭಾರತಿ, ಬಾಲಕೃಷ್ಣ, ಅಶ್ವತ್ಥ್, ಪಂಡರಿಬಾಯಿ
ನಿರ್ದೇಶನ : ರಾಶಿ ಸಹೋದರರು ನಿರ್ಮಾಪಕರು : ಎಂ ಜೆ ಎಂ ಸಹೋದರರು
ಪ್ರತಿ ದಿನ 3 ಪ್ರದರ್ಶನಗಳು

ಬೆಳಗಿನ ಪ್ರದರ್ಶನ ಪ್ರತಿ ದಿನ 10-30
ಮಂತ್ರಾಲಯ ಮಹಾತ್ಮೆ ಅಥವಾ ರಾಘವೇಂದ್ರ ವಿಜಯ

ಅಪೆರಾ 11 8 72 ರಿಂದ

— ಅತ್ಯಮೋಘ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ —

ಲಾಲ್ ಪತ್ತರ್

ಪಾತ್ರ— ರಾಜ್‌ಕುಮಾರ್, ಹೇಮಾವಯಲಿನಿ, ರಾಖಿ, ವಿನೋದ್ ಮೆಹ್ರಾ
ದಿನ 3 ಪ್ರದರ್ಶನಗಳು

Contribute Liberally to the National Defence Fund

ಮೈಸೂರು ಇರ್ವಿನ್ ರಸ್ತೆಯಲ್ಲಿರುವ ಭವ್ಯವಾದ
ಕಟ್ಟಡದಲ್ಲಿ
9 ನೇ ಆಗಸ್ಟ್ 72 ರ ಮಧ್ಯಾಹ್ನಾತ್ಪರ 4 ಗಂಟೆಗೆ

ಹೊಟೇಲ್ ಬಿಲಾಲ್‌ನ್ನು

ಮೈಸೂರು ರಾಜ್ಯದ ಸಾರಿಗೆ ಮಂತ್ರಿಯವರಾದ
ಜನಾಬ್ ಅಜೀಜ್ ಸೇಟ್
ಅವರು ಕೃಪೆಯಿಟ್ಟು ಉದ್ಘಾಟಿಸಿದರು
ಮಹಾಜನರ ಪ್ರೋತ್ಸಾಹ ಕೋರಿದೆ

ಎಂ. ಅಬ್ದುಲ್ ರಜಾಕ್, ಮಾಲೀಕರು

Protect the Cow

Help The Gorakshana

— Humanitarian Propoganda Monthly ....

Edited Printedand Published by Dharmapracharanirata M S Krishna Rao (Propretor) at the Satvavadi Press

ಆಗಸ್ಟ್ ಹದಿನೆದು

ಅ ಲ್ಲ

ಬಂದಿತು ನೂತನದಿನ ಹದಿನೈದು
ಆಗೋಸ್ತು ತಿಂಗಳ ಮಧ್ಯದಲಿ
ಹಿಂದಿನ ನೆನಹನು ಸ್ಮರಿಸಲಿಕೆಂದು
ದೇಶ ಹಿಸ್ಸೆಷಿಯ ಬಾಳಿನಲಿ.

ಗಾಂಧಿ ಸುಭಾಷರ ದಿವ್ಯ ಚರಿತ್ರೆಯ
ಹೊಂಗಡವೀಶುಭ ಹದಿನೈದು
ಹುತಾತ್ಮಕೆಲ್ಲಕೆ ಶ್ರದ್ಧಾಂಜಲಿಯ
ಅರ್ಪಿಸುವೀವಿನ ಬಂದಿಹುದು.

ಓ ದಿವ್ಯಾತ್ಮವೇ, ಹೃದಯದ ಹಂಬಲ
ತೀರಿತೆ? ಈಗಣ ಸ್ಥಿತಿ ಕಂಡು !
ಏನ್ನುತ ಕಂಬನಿ ಮಿಡಿಯುವ ಹಲಕೆಲ
ದೇ ಭ. ರ ಖೇದದ ಉಸಿಗೊಂಡು.

ಬಂದತು ವಾರ್ಷಿಕ ಸ್ವಾತಂತ್ರೋತ್ಸವ
ಭಾರತದೇಶದ ಪುಣ್ಯದಿನ
ತಂದಿತು ಸ್ಫೂರ್ತಿ ಕಾರ್ಯೋತ್ಸಾಹವ
ಕಾಣಲು ಭಾಗ್ಯದ ಭಾಸ್ಕರನ

ಬನದಲಿ ತರುಲತೆ.ಹೂಗಳು ತೊನೆದು
ಕಳಿಸಿವೆ ಮಂಗಳ ಸ್ಪಂದೇಶ
ಶುಕ ಪಿಕ ಸುಮಧುರ ಕಲರವ ಮಿಡಿದು
ಸುರಿದಿವೆ ಶಾಂತಿಯ ಹೊಂಗಲಶ.

— ವಜ್ರಳ್ಳಿ ಗಣಪತಿಶರ್ಮಾ

ಸಾಮಾಜಿಕ ಬದಲಾವಣೆ

ಭಾರತ ಕಳೆದ ಕೆಲವು ದಶಕಗಳಿಂದ ಅಭೂತಪೂರ್ವ ಪರಿವರ್ತನೆಯ ಸುಳಿಗೆ ಸಿಲುಕಿದೆ. ಇಂದು ದೇಶದ ಎಲ್ಲೆಡೆಯಲ್ಲೂ ಕನಿಷ್ಠ ಮಟ್ಟದ ಪರಿವರ್ತನೆಯಾಗಿದೆ. ಈಗ ಜನರು ಭವಿತವ್ಯದ ಬಗ್ಗೆ ಆಶೋತ್ತರ ಹೊಂದಿದ್ದಾರೆ. ಸಮಾಜ ಪರಿವರ್ತನೆಯ ಮಹಾಕಾರ್ಯದಲ್ಲಿ ಸಾಮೂಹಿಕ ಮಾಧ್ಯಮಗಳ ಪಾತ್ರ ಅದ್ವಿತೀಯವಾಗಿದೆ.

ಸಾಮೂಹಿಕ ಮಾಧ್ಯಮಗಳು ಸಮಾಜ ಪರಿವರ್ತನೆಯೊಂದಿಗೆ ವಿಕಾಸ ಗೊಂಡಿದೆ ಭಾರತದಲ್ಲಿ ಪ್ರಕಟವಾಗುವ ದಿನಪತ್ರಿಕೆಗಳ ಪ್ರಸಾರ 1953 ರಲ್ಲಿ 20 ಲಕ್ಷವಿದ್ದದ್ದು 1970 ರಲ್ಲಿ 84 22 ಲಕ್ಷಕ್ಕೇರಿತು. ಕಳೆದ 25 ವರ್ಷಗಳಲ್ಲಿ ರೇಡಿಯೋ ಶ್ರೋತೃಗಳ ಸಂಖ್ಯೆ 28 ಲಕ್ಷದಿಂದ 11 ಕೋಟಿಗೇರಿದೆ. ಚಲನ ಚಿತ್ರ ಮಂದಿರಗಳ ಸಂಖ್ಯೆ 1384 ರಿಂದ 7173 ಕ್ಕೆ ಏರಿತು ಭಾರತದಲ್ಲಿ ಪ್ರತಿವರ್ಷ ತಯಾರಾಗುವ ಚಿತ್ರಗಳ ಸಂಖ್ಯೆ 281 ರಿಂದ 400 ಕ್ಕೆ ಏರಿದೆ

ಪುಸ್ತಕ, ದಿನಪತ್ರಿಕೆ ಚಲನಚಿತ್ರಗಳಿಂದ ನಾವೆಷ್ಟು ಕಲಿತುಕೊಳ್ಳುತ್ತಿದ್ದೇವೆಂಬುದನ್ನು ನಾವು ಮರೆತುಬಿಡುತ್ತಿದ್ದೇವೆ ಆದುದರಿಂದ ಈ ಮಾಧ್ಯಮಗಳ ಅಭಿವೃದ್ಧಿಗೆ ಕ್ರಮ ಕೈಗೊಳ್ಳಲಾಗಿದೆ.

ಸ್ವಾತಂತ್ರ್ಯಾನಂತರ
ನಮ್ಮ ರಾಷ್ಟ್ರ ಆರ್ಥಿಕರಂಗದಲ್ಲಿ ಸಾಧಿಸಿದ ಪ್ರಗತಿಯ ಸ್ಥೂಲ ಸೂಚನೆ ಇಲ್ಲಿದೆ

★

ಕೃಷಿ ಉತ್ಪಾದನೆ ಹೆಚ್ಚುಕಡಮೆ ದ್ವಿಗುಣಗೊಂಡಿದೆ.

ಔದ್ಯಮಿಕ ಉತ್ಪಾದನೆ ನೂರಕ್ಕೆ 82 ಪಾಲು ಹೆಚ್ಚಾಗಿದೆ

ವಿದ್ಯುತ್ ಸ್ಥಾಪಕ ಶಕ್ತಿ ಎಂಟು ಪಾಲು ಅಧಿಕಗೊಂಡಿದೆ

ರಸ್ತೆಗಳ ಜಾಲ ಇಮ್ಮಡಿಯಾಗಿದೆ.

ಪ್ರತಿಯ ಸರಾಸರಿ ವಯೋಮಾನ 32 ವರ್ಷಗಳಿಗೇರಿದೆ.

ಅಂದು ಪ್ರತಿ ನೂರರಲ್ಲಿ 16 ಮಂದಿ ಓದು ಬರಕ ಬಲ್ಲವರಿದ್ದರು ; ಈಗ ಪ್ರತಿಶತ 30 ಮಂದಿ ಸಾಕ್ಷರರು.

ಗ್ರಾಮಾಂತರ ಅಂಚೆ ಕಚೇರಿಗಳ ಸಂಖ್ಯೆ ಮೂರು ಪಾಲು ಹೆಚ್ಚಿದೆ.

ವೈದ್ಯರ ಸಂಖ್ಯೆ ದ್ವಿಗುಣಿತವಾಗಿದೆ.

ಒಟ್ಟು ರಾಷ್ಟ್ರೀಯ ಉತ್ಪನ್ನ (GNP) 33 ಕೋಟಿ ರೂಪಾಯಿಗಳಿಗೇರಿದೆ.

ನಿರ್ಯಾತ ವ್ಯಾಪಾರ ನೊತ್ತ ಮೂರು ಪಾಲು ಪಾಲು ಹೆಚ್ಚಾಗಿದೆ

ಪ್ರಾಥಮಿಕ ಶಾಲೆಗಳಿಗೆ ಹೋಗುವ ಮಕ್ಕಳ ಸಂಖ್ಯೆ ಎರಡು ಪಾಲು ಅಧಿಕಗೊಂಡಿದೆ.

ಅಭಾವದಿಂದ ಸಮೃದ್ಧಿಯೆಡಗೆ

ಭಾರತದ ಬೇಸಾಯ ಕ್ಷೇತ್ರದಲ್ಲಿ 47 ರಿಂದೀಚೆಗೆ ನಿರೀಕ್ಷೆಗೆ ಮೀರಿದ ಸಾಧನೆಯಾಗಿದೆ. ಇದು ಪ್ರತಿಯೊಬ್ಬರೂ ಹೆಮ್ಮೆ ಪಡಬೇಕಾದ ವಿಷಯ. ಒಂದು ಕಾಲದಲ್ಲಿ ಆಹಾರಧಾನ್ಯಗಳ ವಿಷಯದಲ್ಲಿ ಅಭಾವಕ್ಕೆ ಗುರಿಯಾಗಿದ್ದ ಭಾರತ ಆಹಾರಧಾನ್ಯಗಳೇ ಅಲ್ಲ, ಸೆಣಬು ಹತ್ತಿ ಇತ್ಯಾದಿ ಇತರ ಬೇಸಾಯ ವಸ್ತುಗಳಲ್ಲಿ ಪೂರ್ಣ ಪರಿಪೂರ್ಣತೆಯನ್ನು ಸಾಧಿಸುವ ದಿಶೆಯಲ್ಲಿದೆ. ಪ್ರತಿಯೊಬ್ಬ ಪ್ರಜೆಗೆ ಲಭ್ಯವಾಗುತ್ತಿದ್ದ ಬಳಕೆದಾರರ ವಸ್ತುಗಳ ಪ್ರಮಾಣ ಇಂದು ಸಾಕಷ್ಟು ಏರಿದೆ.

●

ಕೈಗಾರಿಕಾ ಕ್ಷೇತ್ರದಲ್ಲಿ ಸ್ವಾವಲಂಬನೆ

ಸ್ವಾತಂತ್ರ್ಯಾನಂತರ ಭಾರತದ ಆರ್ಥಿಕಾಭಿವೃದ್ಧಿಯಲ್ಲಿ ಕೈಗಾರಿಕಾ ಅಭಿವೃದ್ಧಿಯಲ್ಲಿ ಕೈಗಾರಿಕಾ ಬೆಳವಣಿಗೆಯ ಗಾತ್ರ ಹಾಗೂ ವಿನ್ಯಾಸ ಅತ್ಯಂತ ಮಹತ್ವದ್ದಾಗಿದೆ. ಭಾರತದಲ್ಲಿ ಕಳೆದ ಕಾಲು ಶತಮಾನದಲ್ಲಾಗಿರುವ ಕೈಗಾರಿಕಾಭಿವೃದ್ಧಿಯಿಂದ ಮಹಾ ಪರಿವರ್ತನೆಯಾಗಿದೆ ; ಇದರಿಂದ ಭಾರತದ ಅರ್ಥ ವ್ಯವಸ್ಥೆಯ ಆಧುನೀಕರಣವಾಗಿ ಸ್ವಾವಲಂಬನೆ ಸಾಧಿಸಲಾಗಿದೆ.

ಜನತೆಗೆ ರಾಜಾಜಿ ಕರೆ — ಸ್ವಾತಂತ್ರ್ಯ ರಜತೋತ್ಸವ ಸಂದೇಶ

★

ಐವತ್ತು ವರ್ಷಗಳ ಹಿಂದೆ ಗಾಂಧೀಜಿಯವರ ಮಾರ್ಗದರ್ಶನದಲ್ಲಿ ದೇಶದ ಸ್ವಾತಂತ್ರ್ಯ ಹೋರಾಟ ಸ್ಫಾರಂಭವಾದಾಗ, ಜನತೆ ದೇಶಕ್ಕಾಗಿ ತಮ್ಮನ್ನು ಯಾವ ರೀತಿ ಸಮರ್ಪಿಸಿಕೊಂಡಿದ್ದರೆಂಬುದನ್ನು ನಾನು ಬಲ್ಲೆ. ಈಗಿನ ಪರಿಸ್ಥಿತಿಯನ್ನು ಆಗಿನ ಪರಿಸ್ಥಿತಿಯೊಂದಿಗೆ ತೂಗಿ ನೋಡಿದಾಗ ಗಣ್ಯ ವ್ಯಕ್ತಿಗಳಲ್ಲಿ ಅಧಿಕಾರ ದಾಹ್ಹ ಹೆಚ್ಚುತ್ತಿರುವುದು ಸ್ಪಷ್ಟವಾಗುತ್ತದೆ. ಈ ಗಣ್ಯ ವ್ಯಕ್ತಿಗಳು ನೀತಿಯನ್ನು ಬಲಿಗೊಟ್ಟಾದರೂ ಅಧಿಕಾರ ಸಂಪಾದಿಸಲು ಯತ್ನಿಸುತ್ತಿರುವುದನ್ನು ಕಂಡು ನನಗೆ ವ್ಯಸನವಾಗುತ್ತಿದೆ. ಭಾರತದಲ್ಲೇ ಏಕೆ, ಇಡೀ ವಿಶ್ವದಲ್ಲೆ ಇಂದು ನೈತಿಕ ಮಟ್ಟ ಪತನವಾಗಿದೆಯೆಂದು ಸಮಾಧಾನಪಟ್ಟಕೊಳ್ಳಬೇಕಾಗಿದೆ. ಇದನ್ನು ಸಮಾಧಾನಕರವೆಂದು ಕರೆದರೂ ತಪ್ಪಾದೀತು.

ದೇವರು ದಯಾಮಯ. ಒಂದಿಲ್ಲದೊಂದು ರೀತಿಯಲ್ಲಿ ಮಹಾನ್ ನೈತಿಕ ಕ್ರಾಂತಿ ಉಂಟಾಗುವುದೆಂದು ನಾನು ಹಾರೈಸುತ್ತೇನೆ. ಈ ಕ್ರಾಂತಿ ವಿಪತ್ತಿನ ಮೂಲಕ ಉಂಟಾಗಬಹುದು ಅಥವಾ ಸುಖಮಯ ರೀತಿಯಲ್ಲಿ ಸಾಧ್ಯವಾಗಬಹುದು.

ಅಖಿಲ ಭಾರತದಲ್ಲಿ ಕೂಡಲೇ



ಗೋವಧೆ ನಿಷೇಧವಾಗಲಿ

' ಮಾನವನು ಕೀಳು ಸೃಷ್ಟಿಯ ಧಣಿ, ಶ್ರಿಷ್ಠನೆನ್ನುವುದು ಸೊಕ್ಕಿನ'ಕಲ
ಬದುಕಿಗೆ ಮಹತ್ ಶಕ್ತಿ ಕೊಡಲ್ಪಟ್ಟ ಅವನು ಮೃಗಸಾಮ್ರಾಜ್ಯಹ ಧರ್ಮಕರ್ತ
— ಮಹಾತ್ಮಾ ಗಾಂಧಿ

ಈ ದೇಶ ಹೊತ್ತ ಚಿತ್ರ ಸಂದೇಶ ರವರ ಚೊಚ್ಚಲು ಚಿತ್ರ

ಅನೆ - ಹುಡುಗ

SHAKTI
SUDHA

A Superb Tonic

ಪ್ರಗತಿಯ ನವಯುಗ

ಭಾರತದ ಸ್ವಾತಂತ್ರ್ಯವು ಕರ್ನಾಟಕದ ಏಕೀಕರಣಕ್ಕೆ ಹಾರಿ ಮಾಡಿ ಕೊಟ್ಟಿತು; ಫಲವಾಗಿ ನವ ಮೈಸೂರು ರಾಜ್ಯ 1956 ರಲ್ಲಿ ಜನ್ಮ ತಾಳಿತು.

ಅಂದಿನಿಂದ ರಾಜ್ಯವು ಅಭಿವೃದ್ಧಿಯ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಪ್ರಗತಿಯನ್ನು ಸಾಧಿಸಿ ಅಭಿವೃದ್ಧಿಯ ಮಾರ್ಗದಲ್ಲಿ ಮುನ್ನಡೆಯುತ್ತಿದೆ.

ಮೈಸೂರು ರಾಜ್ಯವು ಕೂಡ ಸ್ವತಂತ್ರ ಭಾರತದ ಇತರ ಪ್ರದೇಶಗಳ ಜೊತೆಗೆ ಹೆಜ್ಜೆಗೆ ಹೆಜ್ಜೆಯಿಟ್ಟು ಭೂ ಸುಧಾರಣೆಯಂತಹ ಪ್ರಗತಿ ಪರ ಕ್ರಮಗಳ ಮುಖಾಂತರ ಆರ್ಥಿಕ ಹಾಗೂ ಸಾಮಾಜಿಕ ರಂಗಗಳಲ್ಲಿ ನವ ಯುಗವನ್ನು ಪ್ರಾರಂಭಿಸುತ್ತಿದೆ.

ಮೈಸೂರು ಸರ್ಕಾರದ ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆಯಿಂದ ಪ್ರಕಟಿತ